"ಹಾಂ! ಇನ್ನೂ ಏನೋ ವಸ್ತು ಇದೆ" ಪೈರೆಟ್ ವೆಲ್ವೆಟ್ ಬಟ್ಟೆಯ ಮೇಲಿದ್ದ ಸಣ್ಣ ವಸ್ತುವನ್ನು ಹೊರಗೆ ತೆಗೆದ. ಅದು ಚಪ್ಪಟೆಯಾಕಾರದ ಸಿಗರೇಟು ಇಡುವ ಕಪ್ಪಗಿನ ಪೆಟ್ಟಿಗೆ.

"ನನ್ನ ಸಿಗರೇಟ್ ಪೆಟ್ಟಿಗೆ!" ಹಾರ್ಡ್‌ಮನ್ ಕಿರುಚಿದರು.

"ನಿಮ್ಮದೇ? ಖಂಡಿತವಾಗಿಯೂ ನಿಮ್ಮದಲ್ಲ ಮಿ. ಹಾರ್ಡ್‌ಮನ್. ಅದರಲ್ಲಿ ನಿಮ್ಮ ಹೆಸರಿನ ಅಕ್ಷರವಿಲ್ಲ."

ಅದರಲ್ಲಿ ಪ್ಲಾಟಿನಂ ಬಣ್ಣದಲ್ಲಿ ಕೊರೆದಿದ್ದ ಎರಡು ಅಕ್ಷರಗಳನ್ನು ಅವರಿಗೆ ತೋರಿಸಿದ. ಹಾರ್ಡ್‌ಮನ್ ಅದನ್ನು ತೆಗೆದುಕೊಂಡರು.

"ನೀವು ಹೇಳಿದ್ದು ಸರಿ. ಇದು ನನ್ನದರ ಹಾಗೇ ಇದೆ. ಆದರೆ ಅಕ್ಷರಗಳು ಬೇರೆ. **'B'** ಮತ್ತು **'P'** ಅದ್ಭುತ – ಪಾರ್ಕರ್!"

"ಅದು ಹಾಗೆ ಕಾಣ್ಸುತ್ತೆ. ಅಜಾಗರೂಕತೆಯ ತರುಣ. ಆ ಕೈಗವಸು ಮತ್ತು ಸಿಗರೇಟ್ ಪೆಟ್ಟಿಗೆ ಅವನದ್ದೇ ಇರಬಹುದು. ಅದೇ ಜೋಡಿ ಸುಳಿವು, ಅಲ್ಲವೇ?"

"**'B'** ಅಂದರೆ ಬರ್ನಾರ್ಡ್ **'P'** ಅಂದರೆ ಪಾರ್ಕರ್!" ಹಾರ್ಡ್‌ಮನ್ ಉದ್ಗರಿಸಿದ, "ಎಂತಹ ನಿರಾಳತೆ ಇದು! ಸರಿ, ಮಿ. ಪೈರೆಟ್. ನಾನು ಆಭರಣವನ್ನು ಹುಡುಕುವ ಜವಾಬ್ದಾರಿಯನ್ನು ನಿಮಗೇ ಬಿಡುತ್ತೇನೆ. ನಿಮಗೆ ಆತನೆ ಅಪರಾಧಿ ಎಂದು ಕಂಡರೆ ನೀವು ಪೊಲೀಸರಿಗೂ ತಿಳಿಸಬಹುದು."

★★★

"ಮತ್ತೆ ನೋಡೋಣ" ಪೈರೆಟ್ ನನಗೆ ಹೇಳಿದ ಮೇಲೆ ಇಬ್ಬರೂ ಮನೆಯಿಂದ ಹೊರಟೆವು.

"ಅವರದ್ದು ಒಬ್ಬರಿಗೆ ಒಂದು ಕಾನೂನು, ಇನ್ನೊಬ್ಬರಿಗೆ ಮತ್ತೊಂದು ಕಾನೂನು – ಇದು ಹಾರ್ಡ್‌ಮನ್ ರೀತಿ! ಆದ್ದರಿಂದ ನಾನು ಇನ್ನೊಂದು ಕೋನದಿಂದ ಆಲೋಚಿಸಬೇಕು. ನನಗೆ ಆ ತರುಣನ ಮೇಲೆ ಅನುಕಂಪವಿದೆ. ಇಡೀ ವಿಷಯವೇ ಕುತೂಹಲಕಾರಿಯಾಗಿದೆ, ಅಲ್ಲವೇ? ಹಾರ್ಡ್‌ಮನ್‌ರಿಗೆ ಲೇಡಿ ರನ್‌ಕಾರ್ನ್ ಮೇಲೆ ಸಂದೇಹ; ನನಗೆ ಕೌಂಟೆಸ್ ಮತ್ತು ಜಾನ್‌ಸ್ಟನ್ ಮೇಲೆ. ಆದರೆ ಸದ್ಯ ಸಿಕ್ಕಿಹಾಕಿಕೊಂಡವನು ಪಾರ್ಕರ್."

"ನೀನ್ಯಾಕೆ ಅವರಿಬ್ಬರ ಮೇಲೆ ಸಂದೇಹ ಪಡ್ತಿಯಾ?"

"ಅದು ತುಂಬಾ ಸರಳವಾದ ವಿಷಯ. ರಷ್ಯಾದ ಅಲೆಮಾರಿ ಅಥವಾ ಆಫ್ರಿಕಾದ ಕೋಟ್ಯಧಿಪತಿಯೇ ಆಗಿರಲಿ ಯಾವ ಹೆಂಗಸು ಬೇಕಾದರೂ ತಾನು ಸರದಾರನ ಪತ್ನಿ ಎಂದು ಹೇಳಿಕೊಳ್ಳಬಹುದು. ಹಾಗೆಯೇ ಯಾರು ಬೇಕಾದರೂ ಪಾರ್ಕ್‌ಲೇನ್‌ನಲ್ಲಿ ಮನೆ ಖರೀದಿಸಿ ದಕ್ಷಿಣ ಆಫ್ರಿಕಾದ ಕೋಟ್ಯಧಿಪತಿ ಅಂತ ಹೇಳಿಕೊಳ್ಳಬಹುದು. ಅದನ್ನು ಯಾರು ವಿರೋಧಿಸ್ತಾರೆ? ಆದರೆ ನಾವು ಬರಿಸ್ಟ್ರೀಟ್‌ನಲ್ಲಿ ಹೋಗುವಾಗ ನಾನು ನಮ್ಮ ಅಜಾಗರೂಕತೆಯ ತರುಣನನ್ನು ಗಮನಿಸಿದ್ದೇನೆ. ಕಬ್ಬಿಣ ಕಾದಾಗಲೇ ಬಡಿಯ ಬೇಕು."

ಬರ್ನಾರ್ಡ್ ಪಾರ್ಕರ್ ಮನೆಯಲ್ಲಿಯೇ ಇದ್ದ. ಅವನು ನೇರಳೆ ಮತ್ತು ಕಿತ್ತಳೆ ಬಣ್ಣದ ನಿಲುವಂಗಿ ಧರಿಸಿ ದಿಂಬಿಗೆ ಒರಗಿ ಕುಳಿತಿದ್ದ. ನಾನೂ ಬಿಳಿಚಹರೆಯ, ತೊದಲು ನುಡಿಯ ತರುಣನನ್ನು ಗಮನಿಸಿದೆ.

"ಗುಡ್ ಮಾರ್ನಿಂಗ್" ಪೈರೆಟ್ ಒಂದೇ ಉಸುರಿಗೆ ಹೇಳಿದ, "ನಾನು ಹಾರ್ಡ್‌ಮನ್ ಅವರ ಮನೆಯಿಂದ ಬರ್ತಿದ್ದೇನೆ. ನಿನ್ನೆ ಯಾರೋ ಅವರ ಆಭರಣಗಳನ್ನು ಕದ್ದಿದ್ದಾರೆ. ಅವರು ನಿಮ್ಮ ಬಳಿ ಅದರ ಕುರಿತಂತೆ ಕೇಳಲು ಅನುಮತಿ ನೀಡಿದ್ದಾರೆ. ಇದು ನಿಮ್ಮ ಕೈಗವಸೇ?"

ಪಾರ್ಕರ್‌ನ ಆಲೋಚನಾಶಕ್ತಿ ನಿಧಾನವಾಗಿತ್ತು. ಅವನು ಕೈಗವಸನ್ನು ದಿಟ್ಟಿಸಿದ. ಅವನು ತನ್ನ ಬುದ್ಧಿಶಕ್ತಿಯನ್ನು ಒಟ್ಟು ಸೇರಿಸಿದ.